ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್.—ವಿಧೇಯಕವನ್ನು ಮಂಡಿಸಲಾಗಿದೆ. *

೧೯೯೦ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ. ಜೆ. ಜಾರ್ಜ್(ಆಹಾರ, ನಾಗರೀಕ ಪೂರೈಕೆಗಳು ಮತ್ತು ಸಾರಿಗೆ ರಾಜ್ಯ ಸಚಿವರು).—

ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್.—ಪ್ರಸ್ತಾಪ ಏನೆಂದರೆ : ''೧೯೯೦ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಛೇರ್ಮನ್.—ವಿಧೇಯಕವನ್ನು ಮಂಡಿಸಲಾಗಿದೆ. *

೧೯೯೦ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ವಾರ್ತಾ ಮತ್ತು ಪುರಾಸೋದ್ಯಮ ಮಂತ್ರಿಗಳು).—

ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸು ಮತ್ತು ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರ ಪರವಾಗಿ ೧೯೯೦ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್.—ಪ್ರಸ್ತಾವ ಏನೆಂದರೆ,

''೧೯೯೦ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್.—ವಿಧೇಯಕವನ್ನು ಮಂಡಿಸಲಾಗಿದೆ. *

---

* Annexures.